9

# ಯೇಸುವಿನ ಆತ್ಮಿಕ ವಿಷಯಾಂಶ

ಯೇಸುವಿನ ಮಾನವತೆಯನ್ನು ಪರೀಕ್ಷಿಸುವಲ್ಲಿ ಆತನು ಯಾವ ರೀತಿಯಲ್ಲಿ ನಮ್ಮ ಹಾಗೆ ಇದ್ದನು ಎಂಬುದನ್ನು ನಾವು ಹುಡುಕತಕ್ಕದ್ದು. ಹಾಗಿದ್ದರೂ ಅದಕ್ಕೆ ವಿರುದ್ಧವಾದದ್ದು ನಮಗೆ ಸವಾಲಾಗಿದೆ. ಆತನ ಜೀವಿತವನ್ನು ಮಾನವ ಜೀವಿತದಂತೆ ತಿಳಿದುಕೊಳ್ಳುವ ಮಾರ್ಗಗಳನ್ನು ನಾವು ಹುಡುಕತಕ್ಕದ್ದು. ಇದು ಭಾರವಾದ ಕಾರ್ಯ ವೆಂದು ಸ್ಪಷ್ಟವಾಗಿದೆ. ಮತ್ತಾಯ 5ರಲ್ಲಿ ಧನ್ಯವಾಚಕಗಳನ್ನು ನಾವು ಓದುವಾಗ ಇದನ್ನು ಅರ್ಥಮಾಡಿಕೊಳ್ಳುತ್ತೇವೆ, ಗಲಿಬಿಲಿಗಳ ಸಂಗತಿಯು ನಮ್ಮ ಕಾರ್ಯಗಳನ್ನು ಹೆಚ್ಚು ಕಠಿಣವಾದದ್ದನ್ನಾಗಿ ಮಾಡುವುದು, ನಮ್ಮ ಸ್ವಂತ ಮಾನವತೆಯ ಬಗ್ಗೆ ನಾವು ನಿಶ್ಚಿತತೆಯುಳ್ಳವರಾಗಿರಲಿಕ್ಕಿಲ್ಲ. ಉದಾಹರಣೆಯಾಗಿ ನಾವು ಆತ್ಮ ಹಾಗೂ ಪ್ರಾಣವನ್ನು ಹೇಗೆ ದೃಷ್ಟಿಸುತ್ತೇವೆ? ಯೇಸುವಿಗೆ ಆತ್ಮ ಮತ್ತು ಪ್ರಾಣವಿತ್ತು, ಹಾಗೆ ನಮಗೂ ಇದೆ. ಇದು ಆತನ ಮಾನವತೆಯ ಮತ್ತು ನಮ್ಮ ಮೂಲಭೂತ ಭಾಗಗಳಾಗಿವೆ. ಯೇಸುವಿನಂತಾಗಲು ಅಪೇಕ್ಷಿಸುವ ಕ್ರೈಸ್ತನು ತನ್ನ ಸ್ವಂತ ಆತ್ಮ ಮತ್ತು ಪ್ರಾಣದೊಂದಿಗೆ ಹೇಗೆ ಹೊಂದಿಕೊಂಡು ಹೋಗುವನು? ಪ್ರಶ್ನೆಯು ಕಠಿಣವಾದದ್ದು ಎಂದು ಒಪ್ಪಿಕೊಳ್ಳು ತ್ತೇವೆ. ಮಾನವ ಜೀವಿಯಂತೆ ಯೇಸುವಿನಲ್ಲಿ ಆತ್ಮ ಮತ್ತು ಪ್ರಾಣದ ಸ್ಥಾನವನ್ನು ನಾವು ಹೇಗೆ ಹೆಚ್ಚು ಮೆಚ್ಚಿಕೊಳ್ಳಬಹುದು?

## ಆತನ ಆತ್ಮಿಕ ಸ್ವಭಾವವು ವಿವರಿಸಲ್ಪಟ್ಟಿತು

ಮೊದಲನೆಯದಾಗಿ, ಆತ್ಮ (*pneuma*) ಹಾಗೂ ಪ್ರಾಣ (*psuche*) ಇವು ಭೌತಿಕ ವಾದವುಗಳಲ್ಲವೆಂದು ಯೋಚಿಸತಕ್ಕದ್ದು. ಒಂದು ಅರ್ಥದಲ್ಲಿ ಅವೆರಡು "ಅತ್ಮಿಕ"ವಾದ ವುಗಳಾಗಿವೆ. ಆದುದರಿಂದ ಆತ್ಮ ಮತ್ತು ಪ್ರಾಣ ಎರಡೂ ಒಂದೇ ತಿರುಳಾಗಿವೆ. ಅಂದರೆ ಆತ್ಮವಾಗಿವೆ. ಹಾಗಾದರೆ ನಾವು ಯಾಕೆ ಭಿನ್ನತೆ ಮಾಡುತ್ತೇವೆ? ಭಿನ್ನತೆಯಾವುದು? ಕೆಲವು ಸಲ ಎರಡು ಪದಗಳು ಅದಲು ಬದಲಾಗಿ ಉಪಯೋಗಿಸುವ ಕಾರಣದಿಂದ ಎರಡರ ಮಧ್ಯದಲ್ಲಿ ಗ್ರಹಿಸಿಕೊಳ್ಳುವುದು ಕಷ್ಟಕರವಾಗುತ್ತದೆ.

ಆತ್ಮದಲ್ಲಿ *(pneuma)* ನಮ್ಮ ಅಮರತ್ವವು ಇರುವದನ್ನು ನಾವು ಕಂಡುಕೊಳ್ಳು ತ್ತೇವೆ. ಮೊದಲು ಕ್ರೈಸ್ತ ಹತಸಾಕ್ಷಿಯಾದ ಸ್ತೆಫನನ ಕೊನೆಯ ಮಾತುಗಳಲ್ಲಿ, ಲೂಕನು ದಾಖಲೆ ಮಾಡಿದ್ದರಲ್ಲಿ ಈ ಪ್ರಾರ್ಥನೆಯು ಇತ್ತು: "ಕರ್ತನಾದ ಯೇಸುವೇ, ನನ್ನ ಆತ್ಮವನ್ನು ಸ್ವೀಕರಿಸಿಕೋ" (ಅಪೊಸ್ತಲರ ಕೃತ್ಯ 7:59). ಯೇಸುವು ಶಿಲುಬೆಯ ಮೇಲೆ ಸಾಯುತ್ತಿದ್ದಾಗ, "ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗಳಲ್ಲಿ ಒಪ್ಪಿಸುತ್ತೇನೆ" (ಲೂಕ 23:46) ಎಂದು ಆತನು ಹೇಳಿದಾಗ, ಆತನು ಕೀರ್ತನೆ 31:5ನ್ನು ಉಲ್ಲೇಖಿ ಸಿದನು. ಅಲ್ಲಿ ಸಮಾನವಾದ ಇಬ್ರಿಯ ಪದವು *(ruach)* ಕಂಡು ಬಂದಿತು. "ಆತ್ಮನು ತನ್ನನ್ನು ಕೊಟ್ಟ ದೇವರ ಬಳಿಗೆ ಹಿಂದಿರುಗುವುದು" (ಪ್ರಸಂಗಿ 12:7ಬಿ) ಎಂಬ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಹಾಗಾದರೆ ಒಬ್ಬನ ಆತ್ಮವು *(pneuma)* ಅವನ ಜೀವಿತದ ಎತ್ತರಿಸಲ್ಪಟ್ಟ, ಅಮರತ್ವವುಳ್ಳ ಭಾಗವಾಗಿದೆ.

ಇನ್ನೊಂದೆಡೆಯಲ್ಲಿ, ಪ್ರಾಣ *(psuche)* ಇದೆ. ಅದೂ ಸಹ ಭೌತಿಕವಲ್ಲದ್ದಾಗಿದೆ. ಹಾಗಿದ್ದರೂ ಪ್ರಾಣವು ಮನುಷ್ಯನ ಉನ್ನತಕ್ಕೇರಿಸಲ್ಪಟ್ಟ ಸ್ವಭಾವವಾಗಿರುವದಿಲ್ಲ. ಅದು ಮಾನವ ಭಾವೋದ್ರೇಕಗಳ ಆಸನ ಇಲ್ಲವೇ ಸಾಧನವಾಗಿರುವುದು; ಅದನ್ನು ನಾವು ಸ್ವಾಭಾವಿಕವಾದದ್ದು ಇಲ್ಲವೇ ಪಶುಪ್ರಾಯವಾದದ್ದು ಎಂದು ಕರೆಯಬಹುದು. ತಮ್ಮ ಅಸ್ತಿತ್ವದ ಭಾಗದ ಮೇಲೆ, ಪಶುಭಾವದ ಇಲ್ಲವೇ ಸ್ವಾಭಾವಿಕವಾದ ಭಾಗದ ಮೇಲೆ ಪ್ರಾಧಾನ್ಯತೆಯಿಡುವ ಜನರ ಬಗ್ಗೆ ಯೂದನು ಹೇಳಿದ್ದಾನೆ. "ಇವರು ಭೇದಗಳನ್ನು ಉಂಟುಮಾಡುವವರೂ ಪ್ರಾಕೃತ ಮನುಷ್ಯರೂ ದೇವರಾತ್ಮವಿಲ್ಲದವರೂ ಆಗಿದ್ದಾರೆ" (ಯೂದ ವಚನ 19). ಯೂದನು ಮನುಷ್ಯರನ್ನು *Psuchikoi* "ಪ್ರಾಕೃತ" ಮನುಷ್ಯರು ಎಂದು ಕರೆದನು. *psuche* ಎಂಬುದು ಶರೀರ (ಮಾಂಸ) ಆಗಿರದೇ ಇರುವದರಿಂದ, ಯೂದ ಮತ್ತು ಹೊಸ ಒಡಂಬಡಿಕೆಯ ಬರಹಗಾರರು ಈ ಪದವನ್ನು ಶರೀರದ (*sarx* ಮಾಂಸದ) ಅಪೇಕ್ಷೆಗಳಿಗೂ ಹಸಿವೆಗಳಿಗೂ ಒಪ್ಪಿಸಿಕೊಡಲ್ಪಟ್ಟ ಪ್ರಾಕೃತವಲ್ಲದ ಸ್ವಭಾವವನ್ನು ಸೂಚಿಸುವದಕ್ಕಾಗಿ ಉಪಯೋಗಿಸಿದರೆಂದು ನಾವು ಅರ್ಥಮಾಡಿಕೊಳ್ಳುತ್ತೇವೆ.

"ಶರೀರವು" ಮನುಷ್ಯನ ಮರ್ತ್ಯವಾದ (ಪಾಕೃತವಾದ, ಪಶು ಸ್ವಭಾವದ) ಭಾಗವಾಗಿದೆ. ಮಾನವ ಕುಲದ ಮರಣದ ವಿಷಯಗಳ ಮತ್ತು ಅಮರತ್ವದ ಮಧ್ಯದಲ್ಲಿ "ಯುದ್ಧವು" ಎಬ್ಬಿಸಲ್ಪಡುವುದು ಆಶ್ಚರ್ಯವಾದದ್ದಾಗುವದಿಲ್ಲ. ಮಾನವ ಜೀವಿಗಳ ಪ್ರಾಕೃತ ಭಾಗವು, ಅದರ ಸ್ವಭಾವದಿಂದ ಕೆಟ್ಟದ್ದಾಗಿರುವದೆಂದು ಹೇಳಲ್ಪಟ್ಟಿರುವದಿಲ್ಲ. "ಮಾಂಸವು ಆತ್ಮನಾಗಿರುವ ದೇವರನ್ನು ನಂಬುವದನ್ನು ಮರೆತುಬಿಡುವಾಗ ಹಾಗೂ ತನ್ನಲ್ಲಿಯೇ ಭರವಸವಿಟ್ಟುಕೊಳ್ಳುವಾಗ ಮಾಂಸ ಹಾಗೂ ಆತ್ಮವು ಹೊಂದಾಣಿಕೆಯಿಲ್ಲದವುಗಳಾ ಗುತ್ತವೆ," ಯೆರೆಮೀಯ 17:5ff; 2 ಪೂರ್ವ ಕಾಲವೃತ್ತಾಂತ 32:8."[1]

ಆಮೇಲೆ, ದೇಹವು (*soma*) ಇರುತ್ತದೆ. ದೇಹವು ಆಕಾರವಾಗಿದೆ. ಅದು ಜೀವವಿಲ್ಲದ ಸಂಗತಿಗಳಿಗೂ ಅನ್ವಯಿಸುತ್ತದೆ. ಪೌಲನು ಬೀಜಗಳಿಗೆ ದೇಹವಿರುವಂತೆ ಮಾತಾಡಿದನು; ಪಕ್ಷಿಗಳು ಮತ್ತು ಮೀನುಗಳಂಥ ಭೂಲೋಕದ ದೇಹಗಳ ಬಗ್ಗೆ ಹೇಳಿದನು; ಸೂರ್ಯ ಮತ್ತು ನಕ್ಷತ್ರಗಳಂಥ ಆಕಾಶದಲ್ಲಿಯ ದೇಹಗಳ ಬಗೆಗೂ ಅವನು ಹೇಳಿದನು (1 ಕೊರಿಂಥ 15:36-41). ಈ ಮಾತು ಎಲ್ಲಾ ಜೀವಿಸುವಂತಾವುಗಳಿಗೆ ಅನ್ವಯವಾಗುತ್ತದೆ. ಉದಾಹರಣೆಯಾಗಿ, ಯಾಕೋಬನು ಕುದುರೆಗಳ ದೇಹಗಳ ಬಗೆಗೂ ಮಾತಾಡಿದನು (ಯಾಕೋಬ 3:3).

*Soma* ಎಂಬುದು ನಮ್ಮ ಮಾನವ ದೇಹಗಳಿಗೂ ಸಹ ಅನ್ವಯಿಸುವುದು ನಮಗೆ ಆಸಕ್ತಿಯುಳ್ಳದ್ದಾಗಿದೆ. ನಮ್ಮ ದೇಹವು ನಮ್ಮ ವೈಯಕ್ತಿಕ ಪ್ರಕಟಿಸುವಿಕೆಯಾಗಿರುತ್ತದೆ. ಬೆರಳುಗಳ ಅಚ್ಚುಗಳು ಬೇರೆ ಬೆರಳುಗಳ ಅಚ್ಚುಗಳಂತೆ ಇರುವದಿಲ್ಲ, ನಮ್ಮ ದೇಹಗಳು ವ್ಯಕ್ತಿಗಳಂತೆ ನಮ್ಮ ಅಸ್ತಿತ್ವಕ್ಕೆ ಸಾಕ್ಷಿ ಕೊಡುತ್ತವೆ. ದೇವರ ಜೀವಿಗಳಾಗಿ ನಾವು ಜೀವಿಸುತ್ತೇವೆ, ಜನಿಸುತ್ತೇವೆ ಮತ್ತು ನಾವು ಜನಿಸಿದ ದೇಹಗಳಲ್ಲಿ ನಮ್ಮ ಜೀವವಿರುತ್ತದೆ. ನಮ್ಮ ದೇಹಗಳು ಭೌತಿಕವಾದವುಗಳಾಗಿರುತ್ತವೆ. ಹಾಗಿರುವಾಗ ಅವು ಅಮರತ್ವವುಳ್ಳವುಗಳಾಗಿರುವದಿಲ್ಲ. ಭೂಲೋಕದಲ್ಲಿರುವಾಗ ಅವು ಅಸ್ತಿತ್ವದ ಅರ್ಥದಲ್ಲಿ ನಮ್ಮ "ಇರುವಿಕೆಯನ್ನು" ನಾವು ಪ್ರಕಟಿಸುವ ಸಾಧನವಾಗಿರುತ್ತವೆ.

ಇದೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು, ಥೆಸಲೋನಿಕದವರಿಗಾಗಿದ್ದ ಪೌಲನ ಪ್ರಾರ್ಥನೆಯನ್ನು ನಾವು ಹೆಚ್ಚಾಗಿ ಮೆಚ್ಚಿಕೊಳ್ಳಬಹುದು: "ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪರಿಶುದ್ಧ ಮಾಡಲಿ. ನಮ್ಮ ಕರ್ತನಾದ ಯೇಸು

ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ (*pneuma*), ಪ್ರಾಣ (*psuche*), ಹಾಗೂ ಶರೀರವು (*Soma*) ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ" (1 ಥೆಸಲೊನೀಕ 5:23), ಅವರ ಸಂಪೂರ್ಣ ಆತ್ಮಿಕ, ಮಾನವ ಹಾಗೂ ದೈಹಿಕ ಸ್ವಭಾವಗಳು ದೇವರ ಮುಂದೆ ಕಳಂಕವಿಲ್ಲದವುಗಳಾಗಿರ ಬೇಕೆಂದು ಪೌಲನು ಪ್ರಾರ್ಥಿಸುತ್ತಿದ್ದಾನೆಂದು ಬೇರೆ ಮಾತುಗಳಲ್ಲಿ ಹೇಳಬಹುದು.

"ದೇಹವು" (*soma*) 8ನೆಯ ಅಧ್ಯಾಯದಲ್ಲಿಯ ಚಾರ್ಟಿನ ಮೇಲೆ ಇರುವದಿಲ್ಲ. ಯಾಕಂದರೆ ಇದು ನಿಜವಾಗಿಯು "ಅಲ್ಲಿ" ಇರುವದಿಲ್ಲ. ದೇಹವು ನಮ್ಮ ಜೀವದ ರೂಪ ವಾಗಿದೆ. ಅದು ಸ್ಥಳೀಕರಿಸಲ್ಪಟ್ಟ, ವೈಯಕ್ತಿಕ ಸಾಧನವಾಗಿದೆ, ಅದರಲ್ಲಿ ಮತ್ತು ಅದರ ಮುಖಾಂತರ ಚಾರ್ಟಿನ ಎಲ್ಲಾ ಸಂಗತಿಗಳು ನಿಕಟ ಸಂಬಂಧದಲ್ಲಿ ಕಾರ್ಯಮಾಡು ತ್ತವೆ. ಈ ರೀತಿಯಲ್ಲಿ ನಮ್ಮ ವೈಯಕ್ತಿಕ ವ್ಯಕ್ತಿಗಳನ್ನು ಇಲ್ಲವೇ ವ್ಯಕ್ತಿತ್ವಗಳನ್ನು ಬಹಿರಂಗ ಪಡಿಸುತ್ತವೆ.

## ಪ್ರದರ್ಶಿಸಲ್ಪಟ್ಟ ಯೇಸುವಿನ ಆತ್ಮಿಕ ಸ್ವಭಾವ

ಯೇಸುವಿನ ಮಾನವತೆಯನ್ನು ತಿಳಿದುಕೊಳ್ಳುವದಕ್ಕಾಗಿಯೂ ಮೆಚ್ಚಿಕೊಳ್ಳು ವದಕ್ಕಾಗಿಯೂ ಆತ್ಮದ, ಪ್ರಾಣದ ಮತ್ತು ದೇಹದ ಸಂಬಂಧದಲ್ಲಿ ನಾವು ನಮ್ಮ ಮಾನವತೆಯನ್ನು ಯೋಚಿಸುತ್ತಿದ್ದೇವೆ. ಆತನ ಮಾನವತೆಯು ಈ ಎಲ್ಲಾ ಲಕ್ಷಣಗಳನ್ನು ಒಳಗೊಂಡಿರುತ್ತದೆ. "*ಮಾನವ ಜೀವಿಯಂತೆ* ಆತನು ತನ್ನ ಆತ್ಮಿಕ ಸ್ವಾಭಾವವನ್ನು ಹೇಗೆ ತೋರಿಸಿದನು?" ಎಂದು ನಾವು ಪ್ರಶ್ನಿಸುತ್ತೇವೆ.

### ಪ್ರಾರ್ಥನೆಯ ಆತನ ಜೀವಿತ

ಆತನ ಜೀವನದ ಈ ವಿಷಯವನ್ನು ಕಡಿಮೆ ಪಕ್ಷ ಎರಡು ವಿಶೇಷವಾದ ಮಾರ್ಗಗ ಳನ್ನು ನೋಡುತ್ತೇವೆ. ಮೊದಲನೆಯದಾಗಿ ಆತನ ಪ್ರಾರ್ಥನೆಯ ಜೀವಿತವನ್ನು ನಾವು ಯೋಚಿಸುತ್ತೇವೆ. ಅದು ಬೆರಗುಗೊಳಿಸುವಂಥದ್ದಾಗಿರುತ್ತದೆ. ಕುಮಾರನಾದ ದೇವರು ನರಾವತಾರದ ಮೊದಲ ಮತ್ತು ಅನಂತರ ದೇವಕುಮಾರನಾಗಿದ್ದನು. ಹಾಗಾದರೆ ಯಾಕೆ ಕುಮಾರನಾದ ದೇವರು ತಂದೆಯಾದ ದೇವರಿಗೆ ಪ್ರಾರ್ಥಿಸಿದನು? ಕುಮಾರನಾದ ದೇವರು ಮಾನವನೂ ಆಗಿದ್ದನು. *ಆತನು ತನ್ನ ದೈವತ್ವದಲ್ಲಿ ದೈವಿಕನಾಗಿದ್ದಂತೆ, ತನ್ನ ಮಾನವತೆಯಲ್ಲಿ ಮಾನವನೂ ಆಗಿದ್ದನು!*

ಯೇಸುವು "ಅರಣ್ಯ ಪ್ರದೇಶಗಳಿಗೆ ಹೋಗಿ ದೇವರಿಗೆ ಪ್ರಾರ್ಥನೆಯನ್ನು ಮಾಡುತ್ತಿದ್ದನು" (ಲೂಕ 5:16) ಎಂಬುದನ್ನು KJV ಮತ್ತು RSVಯಲ್ಲಿ ಕಂಡು ಕೊಳ್ಳುತ್ತೇವೆ. "ಯೇಸುವು ಆಗಾಗ ಏಕಾಂತ ಸ್ಥಳಗಳಿಗೆ ಹೋಗಿ ಪ್ರಾರ್ಥಿಸಿದನು" ಎಂದು ಭಾಷಾಂತರಿಸುವದರಿಂದ ವರ್ತಮಾನ ಕೃದ್ವಾಚಕಗಳ ಮತ್ತು ಬಹುವಚನ ನಾಮಪದದ ಭಾವನೆಯನ್ನು ಬಹಳ ಸಲ ಇಲ್ಲವೇ ಪುನಃ ಪುನಃ NIV ಉಪಯೋಗಿ ಸುತ್ತದೆ. ತನ್ನ ಶಿಷ್ಯರೊಂದಿಗೆ ಸೇರಲು ನೀರಿನ ಮೇಲೆ ಆತನು ನಡೆದ ಹಿಂದಿನ ಸಾಯಂಕಾಲದಲ್ಲಿ ಪರ್ವತದ ಬಳಿಯಲ್ಲಿ ಒಬ್ಬನೇ ಪ್ರಾರ್ಥಸಿದನು (ಮತ್ತಾಯ 14:23). ಕಪೆರ್ನೌಮಿನಲ್ಲಿ ಪ್ರಾತಃಕ್ಕಾಲದ ಕತ್ತಲೆಯಲ್ಲಿ ಆತನೊಬ್ಬನೇ ಪ್ರಾರ್ಥಿಸಿದನು (ಮಾರ್ಕ 1:35). ತನ್ನ ಶಿಷ್ಯರನ್ನು ಆಯ್ದುಕೊಳ್ಳುವ ಸ್ವಲ್ಪ ಮೊದಲು ಒಂದು ಪರ್ವತದಲ್ಲಿ ಇಡೀ ರಾತ್ರಿ ಪ್ರಾರ್ಥಿಸಿದನು (ಲೂಕ 6:12). ಜನರು ತನ್ನನ್ನು ಯಾರೆಂದು ಯೋಚಿಸಿದ್ದಾರೆ ಎಂದು ತನ್ನ ಶಿಷ್ಯರಿಗೆ ಕೇಳುವ ಮೊದಲು ಏಕಾಂತದಲ್ಲಿ ಆತನು ಪ್ರಾರ್ಥಿಸಿದನು (ಲೂಕ

9:18). ಪ್ರಾರ್ಥಿಸುವದಕ್ಕಾಗಿ ಆತನು ರೂಪಾಂತರದ ಬೆಟ್ಟಕ್ಕೆ ಹೋದನು (ಲೂಕ 9:28, 29). ತನ್ನ ಶಿಷ್ಯರಿಗೆ ಪ್ರಾರ್ಥಿಸುವ ಪಾಠ ಕೊಡುವ ಮೊದಲು ಏಕಾಂತದಲ್ಲಿ ಆತನು ಪ್ರಾರ್ಥಿಸಿದನು (ಲೂಕ 11:1).

ಸುವಾರ್ತಾ ಬರಹಗಾರರಿಂದ ಇದೆಲ್ಲವೂ ಯಾಕೆ ದಾಖಲೆ ಮಾಡಲ್ಪಟ್ಟಿದೆ? ಏಕಾಂತದಲ್ಲಿ ಯೇಸುವು ಪ್ರಾರ್ಥಿಸಿದ್ದು ನಾವು ಎಂದಾದರೂ ಕಲ್ಪಿಸಿದ್ದಕ್ಕಿಂತ ಹೆಚ್ಚಾಗಿ ಆತನ ಮಾನವತೆಗೆ ಹೆಚ್ಚು ಸ್ಪಷ್ಟವಾದ ಸಾಕ್ಷಿಯಾಗಿದೆ.

ವೈಯಕ್ತಿಕ ಅನುಭವದಿಂದ, ಮಾನವ ಜೀವನವು ಪ್ರಾರ್ಥನೆಯಿಲ್ಲದೇ ಶೂನ್ಯವಾದದ್ದು, ಫಲವಿಲ್ಲದ್ದು ಆಗಿರುವದೆಂದು ನಾವು ತಿಳಿದಿರುವೆವು. ಪ್ರಾರ್ಥನೆಯ ಒಳ ಅಂಶವು ಬಹಳ ಭಿನ್ನವಾದದ್ದಾಗಿರುತ್ತದೆ. ಪ್ರಾರ್ಥನೆಯು ಪ್ರಾರ್ಥಿಸುವ ಕ್ರಿಸ್ತನಂತೆ ತಮ್ಮ ಜೀವಿತಗಳನ್ನು ರೂಪಿಸಿಕೊಳ್ಳುವವರೆಲ್ಲರಿಗಾಗಿ ಸ್ಥಿರತೆಯ ಅಸ್ತಿವಾರವಾಗಿದೆ. ಮಾನವ ಜೀವಿತವು ದೇವರಿಲ್ಲದೆ ಮತ್ತು ಪ್ರಾರ್ಥನೆಯ ರೂಢಿಯಿಲ್ಲದೆ ಉಳಿಯುವದನ್ನು ನಿರೀಕ್ಷಿಸಲಾಗದು. ಪ್ರಾರ್ಥಿಸುವದರಿಂದ ನಾವು ನಮ್ಮ ಪ್ರೀತಿಯನ್ನು ಹಾಗೂ ಆರಾಧನೆಯನ್ನು, ಅವಲಂಭಿಸುವಿಕೆಯನ್ನು, ಕೃತಜ್ಞತೆಯನ್ನು, ಬಿನ್ನಹಗಳನ್ನು ವ್ಯಕ್ತಪಡಿಸುತ್ತೇವೆ. ಯೇಸುವು ಪ್ರಾರ್ಥನೆಯಲ್ಲಿ ತನ್ನ ತಂದೆಯ ಕಡೆಗೆ ಸತತವಾಗಿ ಪ್ರವೇಶಿಸಿದನು. ಆತನು ನಮಗೆ ಆದರ್ಶನಾಗಿದ್ದಾನೆ.

ಯೇಸುವಿನ ಪ್ರಾರ್ಥನೆಯ ಅಂತರಾರ್ಥದ ಬಗ್ಗೆ ನಮಗೆ ಹೇಳಲ್ಪಟ್ಟಾಗ ಸ್ತೋತ್ರ ಮಾಡಲು, ಆನಂದಿಸಲು, ಕೃತಜ್ಞತಾ ಸ್ತುತಿ ಮಾಡಲು ಮತ್ತು ಕಣ್ಣೀರು ಸುರಿಸಲು ಚಲಿಸಲ್ಪಡುತ್ತೇವೆ. ಪೇತ್ರನಿಗೆ ಯೇಸುವು ಹೇಳಿದ ಮಾತನ್ನು ಯೋಚಿಸಲು ನಿಂತುಕೊಳ್ಳಿರಿ: "ನಿನ್ನ ನಂಬಿಕೆ ಕುಂದಿಹೋಗಬಾರದೆಂದು ನಾನು ನಿನ್ನ ವಿಷಯದಲ್ಲಿ ದೇವರಿಗೆ ವಿಜ್ಞಾಪನೆ ಮಾಡಿಕೊಂಡೆನು" (ಲೂಕ 22:32ಎ). ಪರಿಶುದ್ಧ ಬರಹಗಳ ಅದ್ವಿತೀಯವಾದ ಹೇಳಿಕೆಗಳಲ್ಲಿ ಇದು ಒಂದಾಗಿದ್ದರೂ ವೈಯಕ್ತಿಕವಾಗಿ, ಪ್ರಾರ್ಥನೆಯಲ್ಲಿ ಯೇಸುವು ನಮಗಾಗಿ ಬೇಡಿಕೊಳ್ಳಲು ನಿನ್ನಲ್ಲಿ ಮತ್ತು ನನ್ನಲ್ಲಿ ಆಸಕ್ತನಾಗಿರುವನೆಂದು ನಮಗೆ ಭರವಸೆ ಕೊಡಲು ಸಾಕಷ್ಟಾದದ್ದಾಗಿದೆ! ಮಾನವತೆಯ ಎಂಥಾ ಆಶ್ಚರ್ಯವಾದ ಪ್ರಕಟಣೆ! ಇತರಿಗಾಗಿರುವ ನಮ್ಮ ಪ್ರಾರ್ಥನೆಗಳಲ್ಲಿ ನಾವು ಅವರ ಜೀವಿತಗಳನ್ನು ದೇವರ ಕೃಪೆ, ಪ್ರೀತಿ, ಕ್ಷಮಾಪಣೆ ಹಾಗೂ ಬಲದಲ್ಲಿ ಇಡುತ್ತೇವೆ. ನಾವು ಪ್ರಾರ್ಥಿಸುವಂತೆಯೇ ಯೇಸುವು ವ್ಯಕ್ತಿಗಳಿಗಾಗಿ ತನ್ನ ತಂದೆಗೆ ಪ್ರಾರ್ಥಿಸಿದನು. ಪ್ರಾರ್ಥನೆಯು ನಿಜ ಮಾನವತೆಯ ಗುರುತಾಗಿರುತ್ತದೆ.

ಯೋಹಾನ 17, ಯೇಸುವಿನ ಪ್ರಾರ್ಥನೆಯ ಅತೀ ವಿಸ್ತಾರವಾದ ದಾಖಲೆಯಾಗಿದೆ. ಉದ್ದದಲ್ಲಿ ಅದು ವಿಸ್ತಾರವಾಗಿರುವಷ್ಟೇ ಅಲ್ಲ, ವ್ಯಾಪ್ತಿಯಲ್ಲಿಯೂ ವಿಶಾಲವಾದದ್ದಾಗಿದೆ. ಆತನು ತನಗಾಗಿ, ತನ್ನ ಶಿಷ್ಯರಿಗಾಗಿ ಮತ್ತು ಅವರ ಸಂದೇಶದ ಮುಖಾಂತರವಾಗಿ ವಿಶ್ವಾಸಿಗಳಾಗುವ ಎಲ್ಲರಿಗೋಸ್ಕರವಾಗಿ ಪ್ರಾರ್ಥಿಸಿದನು: "ನಿನ್ನ ನಂಬಿಕೆಯು ಕುಂದಿಹೋಗ ಬಾರದು ಎಂದು" (ನೋಡಿರಿ ಲೂಕ 22:31, 32) ಆತನು ಪೇತ್ರನಿಗಾಗಿ ಪ್ರಾರ್ಥಿಸಿದಂತೆ ಎಲ್ಲಾ ವಿಶ್ವಾಸಿಗಳಿಗಾಗಿ ಆತನು ಪ್ರಾರ್ಥಿಸುತ್ತಿದ್ದನೋ? ಕ್ರಿಸ್ತನಲ್ಲಿ ನಮ್ಮ ಜೊತೆಗಾರರಿಗಾಗಿ ಅದು ಸತತವಾದ ಪ್ರಾರ್ಥನೆಯಾಗಿರುವದಲ್ಲವೇ?

ಯೇಸುವಿನ ಪ್ರಾರ್ಥನಾ ಜೀವಿತದ ಬಗ್ಗೆ ಹೆಚ್ಚಾದದ್ದನ್ನು ಹೇಳಬಹುದು, ಹೇಳಬೇಕು ಹಾಗೂ ಹೇಳಲ್ಪಡುವುದು. ಗೆತ್ಸೇಮನೆಯಲ್ಲಿ ಮತ್ತು ಶಿಲುಬೆಯ ಮೇಲೆ ಆತನ ಪ್ರಾರ್ಥನೆಗಳು ಆತನ ಮಾನವತೆಯನ್ನು ಬೇರೆ ಇತರವುಗಳಿಗಿಂತ ಎಷ್ಟೋ ಹೆಚ್ಚಾಗಿ ವಿವರವಾಗಿ ಪ್ರದರ್ಶಿಸಲ್ಪಟ್ಟಿದೆ.

**ಕಲ್ವಾರಿಯಲ್ಲಿ ಆತನ ಮರಣ**

ದೂರದರ್ಶನದಲ್ಲಿ ಒಂದು ಶೈಕ್ಷಣಿಕ ಕಾರ್ಯಕ್ರಮವನ್ನು ನಾವು ನೋಡುವಂತೆ ಯೇಸುವಿನ ಗೆತ್ಸೇಮನೆ ಅನುಭವವನ್ನು ಓದುವುದು ಸುಲಭವಾಗಿದೆ. ನಾಟ್ಯಕಾರರ ಸಲಕರಣೆಗಳನ್ನು ನಾವು ಗಮನಿಸಬಹುದು. ಪ್ರದರ್ಶನ ಕೊಡುವವರ ಕಲೆಗಳನ್ನು ನಾವು ಮೆಚ್ಚಿಕೊಳ್ಳಬಹುದು. ಅವರ "ಅಭಿನಯಿಸುವ" ಸಾಮರ್ಥ್ಯದಿಂದ ನಾವು ಪ್ರಭಾವಿತರಾಗಬಹುದು. ಹೌದು, ಕಲೆಯಲ್ಲಿದ್ದವರ ಪಾಠವು ಅಲ್ಲಿರುವದೆಂಬುದನ್ನು ನೋಡುವೆವು. ಆದರೆ ಅದು ನಿಜವಾಗಿಯೂ ಇರುವದರಂತೆ ದೃಷ್ಟಿಸಲಿಕ್ಕಿಲ್ಲ. ಅದನ್ನು ಕೇವಲ ಅಭಿನಯದಂತೆ ಮಾತ್ರ ನೋಡಬಹುದು. ಯೇಸುವು, ಶ್ರೇಷ್ಠ ಬೋಧಕನು, ಗೆತ್ಸೇಮನೆಯಲ್ಲಿ ಇನ್ನೊಂದು ಪಾಠವನ್ನು ಪ್ರದರ್ಶಿಸುತ್ತಿರುವನೋ? ನಮ್ಮ ತೊಂದರೆಗಳನ್ನು ದೇವರಿಗೆ ತೆಗೆದು ಕೊಂಡು ಹೋದರೆ ಆತನು ನಮಗೆ ಪರಿಹಾರ ಕೊಡುವನು ಎಂದು ಬೋಧಿಸಲು ಆತನು ಪ್ರಯತ್ನಿಸುತ್ತಿರುವನೋ? ಇಲ್ಲ! ಪ್ರಾರ್ಥಿಸುವ ಮೊದಲು ಯೇಸುವು, "ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ" ಎಂದು ಹೇಳಿದನು. ಆತನ್ನು ಪ್ರಾರ್ಥಿಸುತ್ತಿರುವಂತೆ, "ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ" ಎಂದೂ ಹೇಳಿದನು. ಮನೋವ್ಯಥೆಯುಳ್ಳವನಾಗಿ "ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು." ಆತನು "ಹೇಗೂ ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ ಆಗಲಿ" ಎಂದೂ ಪ್ರಾರ್ಥಿಸಿದನು (ಮತ್ತಾಯ 26:36-45; ಮಾರ್ಕ 14:32-40; ಲೂಕ 22:39-46).

ಯೇಸುವು ತೋಟದಲ್ಲಿ "ನಟಿಸುತ್ತಿರಲಿಲ್ಲ." ಆತನ ದುಃಖವು ನಿಜವಾದದ್ದಾಗಿತ್ತು. ಯೇಸುವು ತನ್ನ ಜೀವನದಲ್ಲಿ ಅತೀ ಕಠಿಣವಾದ ಹೋರಾಟದಲ್ಲಿ ತೊಡಗಿದ್ದನು. ಶಿಲುಬೆಯು ನಿರೀಕ್ಷಿಸಲ್ಪಟ್ಟಿತ್ತು. ಒಳ್ಳೆಯದರ ಮತ್ತು ಕೆಟ್ಟದ್ದರ ಜಾಗತಿಕ ಯುದ್ಧದಲ್ಲಿ ಆತನು ತೊಡಗಿದ್ದನು. ಆತನು "ವ್ಯಕ್ತಿ ರಹಿತನಾಗಿ" ಸಾರಾಂಶವಾಗಿ ಯುದ್ಧ ಮಾಡುತ್ತಿದ್ದಿಲ್ಲ. ಮಾನವನಂತೆ ಯೇಸುವಿನ ವ್ಯಕ್ತಿತ್ವದ ಮೇಲೆ ಸ್ಪರ್ಧೆಯು ಕೇಂದ್ರೀಕರಿಸಲ್ಪಟ್ಟಿತ್ತು. ಅದು ಸೈತಾನನಿಗೆ ವಿರುದ್ಧವಾದ ಹೋರಾಟವಾಗಿತ್ತು. ತಂದೆಯಾದ ದೇವರು ಮಾನವನಾದ ಯೇಸುವಿನಲ್ಲಿ ವಿಮೋಚನೆಯ ತನ್ನ ಮಹಾ ಯೋಜನೆಯನ್ನು ಕೇಂದ್ರೀಕರಿಸಿದ್ದನು. ಗೆತ್ಸೇಮನೆಯಲ್ಲಿ ಆ ಯೋಜನೆಯು ನಿಷ್ಫಲಗೊಳಿಸಲ್ಪಡುವುದೋ? "ಪಾತ್ರೆಯು" ತೊಲಗಿ ಹೋಗುವಂಥ ಶೋಧನೆಗೆ ಆತನು ಒಪ್ಪಿಸಿಕೊಳ್ಳುವನೋ?

ಈ ನಾಟಕೀಯವಾದ ದೃಶ್ಯವನ್ನು ಪುನರಾವಲೋಕಿಸಿದಂತೆ ನಾವು ಶ್ರಮೆಯುಳ್ಳ ಮಾನಸಿಕ ಸ್ವಯಂಶಿಸ್ತನ್ನು ಪ್ರಯೋಗಿಸದಿದ್ದರೆ, ಯೇಸುವಿನ ಯಾತನೆಗಾಗಿ ಮೂಲ ಭೂತ ಕಾರಣದಿಂದ ನಾವು ಬೇರೆ ದಾರಿಗೆ ಹೋಗುವೆವು. ಯಾವುದೋ ಒಂದು *ಅಕ್ಷರಶಃವಾಗಿ* ತಕ್ಕಡಿಯಲ್ಲಿ ತೂಗುತ್ತಿತ್ತು. ದೈತ್ಯಾಕಾರದ ಹೋರಾಟವು ಪ್ರಗತಿಯಲ್ಲಿತ್ತು, ಯೇಸುವಿನ ಮಾನವತೆಯು ಯೇಸುವಿಗೆ ಸೈತಾನನ ಮೇಲೆ ಲಾಭಕೊಡಲು ದೈವತ್ವವಾಗಿ ಬದಲಾಗಲಿಲ್ಲ. ದೇವರು ಸೈತಾನನಿಂದ ಶೋಧಿಸಲ್ಪಡಲಾರನು (ಯಾಕೋಬ 1:13); ಮಾನವ ಜೀವಿಗಳು ಹಾಗೆ ಮಾಡಬಹುದು. ಯೇಸುವು ಶೋಧಿಸಲ್ಪಟ್ಟನು. ಆತನು ಮಾನವನಾಗಿದ್ದನು. ನಮ್ಮ ಹೋರಾಟವನ್ನು ಮಾನವ ಜೀವಿಗಳಾದ ನಾವು ಜಯಿಸುವ ರೀತಿಯಲ್ಲಿ ಆತನು ಮಾನವ ಜೀವಿಯಾಗಿ ಯುದ್ಧವನ್ನು ಜಯಿಸಿದನು. ನಾವು ಜಯ ಹೊಂದಿದರೆ, ತಂದೆಗೆ ಆಸಕ್ತಿಯುಳ್ಳ ಪ್ರಾರ್ಥನೆಯಿಂದ, ಆತನ ಬಲದಲ್ಲಿ ವಿಶ್ವಾಸವನ್ನು ಇಡುವದರಿಂದ ಮತ್ತು ನಮ್ಮನ್ನು ಕಾಪಾಡಿಕೊಂಡು ಹೋಗುವ ಇಚ್ಛೆಯಿಂದ ನಾವು ಹಾಗೆ ಜಯಿಸುವೆವು (1 ಕೊರಿಂಥ 10:13).

ಯೇಸುವು ಗೆತ್ಸೇಮನೆಯಲ್ಲಿ ಮತ್ತು ಶಿಲುಬೆಯ ಮೇಲೆ, ತನ್ನ ನಿಜವಾದ

ಮಾನವತೆಯನ್ನು ತೋರಿಸಿದನು. ಆತನ ತಂದೆಯು ಮಾಡುವಂತೆ, ಆತನ ಮಾನವತೆಗೆ ನಾವು ಅಂಟಿಕೊಂಡರೆ, ಆತನು ದೇವರಾಗಿದ್ದುದರಿಂದ ಜಯಶಾಲಿಯಾದನು ಎಂದು ಒತ್ತಿಹೇಳುವದರಿಂದ ಅದನ್ನು ಆತನಿಂದ ನಾವು ಕದ್ದುಕೊಳ್ಳಲು ಪ್ರಯತ್ನಿಸುವದಿಲ್ಲ. ಆತನ ಪ್ರಾರ್ಥನೆಗಳು ಯಥಾರ್ಥವಾದವುಗಳಾಗಿದ್ದವು. ತಂದೆಯು ಆತನೊಂದಿಗೆ ಇದ್ದನು. "ಪಾತ್ರೆಯನ್ನು" ತೆಗೆದು ಹಾಕುವದರಿಂದ ಅಲ್ಲ, ಆದರೆ ಯೇಸುವು ದೈಹಿಕ ವಾಗಿ ತಂದೆಯ ಚಿತ್ತವನ್ನು ಕೈಕೊಳ್ಳಲು ಆತನನ್ನು ಬಲಪಡಿಸುವದರಿಂದ ಆತನು ಯೇಸುವಿನ ಪ್ರಾರ್ಥನೆಗಳಿಗೆ ಉತ್ತರ ಕೊಟ್ಟನು (ಲೂಕ 22:43). ಆದುದರಿಂದ ಯೇಸುವು ನಿಶ್ಚಿತತೆಯೊಂದಿಗೆ "ತಂದೆ ನನಗೆ ಕೊಟ್ಟಿರುವ ಪಾತ್ರೆಯಲ್ಲಿ ನಾನು ಕುಡಿಯಬಾರದೋ?" ಎಂದು ಹೇಳಿದನು (ಯೋಹಾನ 18:11ಬ).

ಯೇಸು ಅರಣ್ಯದಲ್ಲಿ ಶೋಧಿಸಲ್ಪಟ್ಟಾಗ ಸೈತಾನನಿಗೆ ವಿರೋಧವಾಗಿ ಕದನದಲ್ಲಿ ಜಯಹೊಂದಿದನು, ಗೆತ್ಸೇಮನೆಯಲ್ಲಿ ಉಗ್ರವಾದ ಹೋರಾಟವನ್ನು ಜಯಿಸಿದನು. ವಿರೋದಾಭಾಸವಾಗಿ, ಆತನು ತನ್ನ ಅತಿ ದೊಡ್ಡ ಜಯವನ್ನು ಶಿಲುಬೆಯ ಮೇಲೆ ಜಯಿಸಿದನು. ಆತನು ತಾನೇ ಕಲಿಸಿದಂತೆ, "ತನ್ನ ಪ್ರಾಣವನ್ನು ಕಂಡುಕೊಂಡನು ಅದನ್ನು ಕಳಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು" (ಮತ್ತಾಯ 10:39). ಗೆತ್ಸೇಮನೆಯಲ್ಲಿ "ತನ್ನ ಜೀವವನ್ನು ಕಂಡುಕೊಳ್ಳಲು" ಯೇಸುವು ಶೋಧಿಸಲ್ಪಟ್ಟನು - ಆದರೆ ಆತನು ಅದನ್ನು ತಿರಸ್ಕರಿಸಿದನು. ಅದರ ಬದಲು ನಮ್ಮ ನಿಮಿತ್ತವಾಗಿ ಶಿಲುಬೆಯಲ್ಲಿ ಆತನು ತನ್ನ ಜೀವವನ್ನು "ಕಳೆದು ಕೊಂಡನು."

ಆ ಆಲೋಚನೆಯು ಹೋಗುವಂತೆ ಎಂದೂ ಬಿಟ್ಟುಬಿಡಬೇಡಿರಿ ಎಂದು ಬೇಡಿ ಕೊಳ್ಳುತ್ತೇವೆ. ಅದು ರಕ್ಷಣೆಗಾಗಿ ನಿರ್ಣಾಯಕವಾದದ್ದಾಗಿದೆ. ಯೇಸುವು ನಿಜವಾಗಿ ಮನುಷ್ಯನಾಗಿರದಿದ್ದರೆ, ಒಂದು ರೀತಿಯಲ್ಲಿ ಆತನ ಮಾನವತೆಯು ನಿಜವಾದದ್ದು ಆಗಿರದಿದ್ದರೆ, ತೋರಿಕೆಯಾಗಿದ್ದರೆ ಇಲ್ಲವೇ ವೇಶ ಹಾಕಿಕೊಂಡದ್ದಾಗಿದ್ದರೆ, ಸುವಾರ್ತೆಗಳಲ್ಲಿಯ ವ್ಯಕ್ತಿಯು ಭೂಲೋಕಕ್ಕೆ ಸಂಬಂಧ ಪಡದ, ಸಂದರ್ಶಿಸಲು ಬಂದ ದೂತನು, ಮಾನವ ರೂಪದಲ್ಲಿಯ ಉಪದೇವರು ಆಗಿದ್ದರೆ, ಆಗ ವಿಮೋಚನೆಯ ಇಡೀ ಬೋಧನೆಯು ನೆಲಕ್ಕೆ ಬಿದ್ದು ಹೋಗುವುದು. ಯೇಸುವಿನ ಪರಿಪೂರ್ಣ ಮಾನವತೆಯನ್ನು ಹಿಡಿದುಕೊಳ್ಳಿರಿ![2]

---

ಟಿಪ್ಪಣಿಗಳು

[1]Edmond Jacob, *"psuche,"* in *Theological Dictionary of the New Testament*, ed. Gerhard Friedrich, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1974), 9:630. [2]James S. Stewart, *The Strong Name* (Grand Rapids, Mich.: Baker, 1972), 76.

© 2009 Truth for Today